ಹಾಸನ ಡಿಸ್ಟ್ರಿಕ್ಟ್ಸ.

ನೋಟಿಸು, ತಾರೀಖು 5ನೆ ಅಕ್ಟೋಬರು 1907ನೆ ಇಸವಿ.

ಎರಡು ವರುಷಗಳಿಗೀಂತಲೂ ಅಧಿಕಕಾಲದಿಂದ ನೀವಾರಸಾಗಿ ಇರುವ ಈದರಡಿ ಕಂಡ ದಸ್ತಾವೇಜನ್ನ ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಕಾಲೀಕರೆ ಆಗಲಿ ಈ ನೋಟಿಸು ತಾರೀಖು ಲಾಗಾಯಿತ್ತು ಒಂದು ತಿಂಗಳೊಳಗಾಗಿ ಮಂಜೂರಾಬಾದ್ ಸಬ್ ರಿಜಿಸ್ಟ್ರಾರ್ ರೂಲು ರೂಪಾ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸಾರ ಈ ಕೆಳಗೆ ನಮೂದಾಗುವ ದಸ್ತಾವೇಜನ್ನ ನಾಶಪಡಿಸುತ್ತೇವೆ:—

ಜನವರಿ ನೆಂಬರ್.	ಸಬ್ ರಿಜಿಸ್ಟ್ರಾರರ ಆಫೀಸು ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ರಿಜಿಸ್ಟರು ಆದ ತಾರೀಖು.	ದಸ್ತಾವೇಜು ರಿಜಿಸ್ಟರು ಆಗದಿರುವದಕ್ಕೆ ಕಾರಣ.	ದಸ್ತಾವೇಜು ಬರದುಕೊಂಡವರ ಹೆಸರು.	ದಸ್ತಾವೇಜು ಸ್ವೀಕಾರವಾದ ಮೊತ್ತ ರೂಪಾಯಿ.
1	ಸಬ್ ರಿಜಿಸ್ಟ್ರಾರರ ಆಫೀಸು, ಮಂಜೂರಾಬಾದು.	I	465 / 1894—95	25—4—1895	27—6—95	ಮಂಜೂರು ತಾಲ್ಲೂಕು ಕಸಬಾ ನಾಡಿನ ಸಂತೆ ಹೋಬಳಿ ನಲ್ಲಿ ಗ್ರಾಮವಿರುವ ಕೆಳಿಕ್ಕಿನ ದೊಡ್ಡಿಗಾಡ. 1. ಪಟೇಲ ಪುಟ್ಟಿಗಾಡ. 2. ಪಟೇಲ ಪುಟ್ಟಿಗಾಡ. 3. ಪಟೇಲ ಪಂಜೆಗಾಡ	ಕುಕ್ಕವಾಡ ಸಂತೆ ಹೋಬಳಿ ನಲ್ಲಿರುವ ಗ್ರಾಮದಲ್ಲಿರುವ ಚಿಕ್ಕಗೌಡನ ಮಗ ನಂಜೇಗೌಡ.	1,000 ರೂಪಾಯಿನ ಅಭಿವೃದ್ಧಿಗಾಗಿ ಮತ್ತು ಪಿತ್ರಾರ್ಜಿತ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ರ 1907—08ನೆ ಇಸವಿ ಮಿ|| ಅರ್ಜೀ ನಂಬರು 361.

ಕ್ಲೋಸ್ಪೇಟೆ ಫಾರಸ್ಟಿನಲ್ಲಿ ವಾಚರಾಗಿದ್ದು ಮೃತಪಟ್ಟ ನರಸಿಂಹುವನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೊಡ್ಡಬಳ್ಳಾಪುರದ ತಾಲ್ಲೂಕು ಹಾಲಿ ಸಾಸಲು ಸಮ್ಮತು ಉಜ್ಜನಿ ಗ್ರಾಮದ ಮಜರ ಮೆಂಗಳಹಳ್ಳಿ ನಿರುವ 1ನೆ ನಂಜಂಡಪ್ಪ, 2ನೆ ಮರಿಯಪ್ಪ, ಮೃತಪಟ್ಟ ಸದರೀ ನರಸನಿಗೆ ಅಂಣತಮ್ಮಂದರು ಆಗಬೇಕೆಂಬ ಹಕ್ಕುದಾರಿ ಮೇಲೆ ಕ್ಲೋಸ್ಪೇಟೆಲಿ ವಾಸಸ್ಥನಾಗಿ ಮೃತಪಟ್ಟ ನರಸನ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 303—15—2 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟಿಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ನಂಜಂಡಪ್ಪ, 2ನೆ ಮರಿಯಪ್ಪನ ಅರ್ಜಿಯನ್ನು ಸ್ರ 1907ನೆ ಇಸವಿ ನವಂಬರು ತಿಂಗಳು 8ನೆ ತಾರೀಖಿನಲ್ಲಿ ಹೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನರಸನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1907ನೆ ಇಸವಿ ಅಕ್ಟೋಬರು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದ್ದ.

ಸ್ರ 1907—08ನೆ ಇಸವಿ ಮಿ" ಅರ್ಜೀ ನಂಬರು 371.

ಆನೇಕಲ್ ತಾಲ್ಲೂಕು ಸರ್ಜಾಪುರದ ಹೋಬಳಿ ದೊಮ್ಮಸಂದ್ರ ಗ್ರಾಮದಲ್ಲಿ ವಾಸವಾಗಿದ್ದು ಮೃತಪಟ್ಟ ತಿಮ್ಮಕ್ಕನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಆನೇಕಲ್ ತಾಲ್ಲೂಕು ಸರ್ಜಾಪುರದ ಕಸಬೇಲಿರುವ ಚನ್ನಸಂದ್ರದ ತಿಮ್ಮಕ್ಕನ ಮಗಳು ನಂಜಮ್ಮ, ಮೃತಪಟ್ಟ ಸದರೀ ತಿಮ್ಮಕ್ಕನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೊಮ್ಮಸಂದ್ರದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮಕ್ಕನ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 101—15—10 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಮ್ಮನ ಅರ್ಜಿಯನ್ನು ಸ್ರ 1907ನೆ ಇಸವಿ ನವಂಬರು ತಿಂಗಳು 8ರಲ್ಲು ಹೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಕ್ಕನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1907ನೆ ಇಸವಿ ಅಕ್ಟೋಬರು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ ಐಯ್ಯರ್,
ಸಬ್ಆರ್ಡಿನೇಟ್ ಜಡ್ಜ್.